# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1090** |
| **ಸದಸ್ಯರ ಹೆಸರು** | : | **ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **22.09.2022** |
| **ಉತ್ತರಿಸುವ ಸಚಿವರು** | : | **ಮಾನ್ಯ ಜಲಸಂಪನ್ಮೂಲ ಸಚಿವರು** |

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಗರಿಬೊಮ್ಮನಹಳ್ಳಿ ಕ್ಷೇತ್ರದ ಕೊಟ್ಟೂರು ಕೆರೆ ಹಾಗೂ ಇತರೆ 17 ಕೆರೆಗಳನ್ನು ತುಂಬಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಕಾರ್ಯವನ್ನು ಪ್ರಾರಂಭಿಸಲಾಗುವುದು ಯಾವಾಗ, ಇದರಿಂದಾಗುವ ಒಟ್ಟು ನೀರಾವರಿ ಭೂಮಿ ಮತ್ತು ಕುಡಿಯುವ ನೀರಿಗೆ ಅನುಕೂಲವಾಗುವ ಹಳ್ಳಿಗಳ, ಊರುಗಳ ಹೆಸರುಗಳೊಂದಿಗೆ ಮಾಹಿತಿ ನೀಡುವುದು.</td><td rowspan="2">ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ರೂ.85.00 ಕೋಟಿ ವೆಚ್ಚದಲ್ಲಿ ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ನೀರನ್ನು ಎತ್ತಿ ಕೊಟ್ಟೂರು ಮತ್ತು ಇತರೆ 11 ಕೆರೆಗಳನ್ನು ತುಂಬಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳುವ ಕುರಿತು 2019-20 ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಘೋಷಣೆಯಾಗಿರುತ್ತದೆ.<br><br>ಸದರಿ ಯೋಜನೆಯಡಿ ಹಡಗಲಿ ತಾಲೂಕಿನ ರಾಜವಾಳ ಹತ್ತಿರ ತುಂಗಭದ್ರಾ ನದಿಗೆ ಜಾಕ್‌ವೆಲ್ ಕಂ ಪಂಪ್‌ಹೌಸ್ ನಿರ್ಮಿಸಿಕೊಂಡು 0.80 ಟಿ.ಎಂ.ಸಿ. ನೀರನ್ನೆತ್ತಿ, ಕೊಟ್ಟೂರು ಮತ್ತು ಹಗರಿಬೊಮ್ಮನಹಳ್ಳಿ ತಾಲೂಕಿನ ವ್ಯಾಪ್ತಿಯ ಒಟ್ಟು 17 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ.<br><br>ಸದರಿ ಯೋಜನೆಯಿಂದ ಅನುಕೂಲವಾಗುವ ಕೆರೆಗಳು ಮತ್ತು ಫಲಾನುಭವಿ ಹಳ್ಳಿಗಳ ವಿವರ ಈ ಕೆಳಗಿನಂತಿದೆ.<br><br>
<table>
<tr><th>ಕ್ರ ಸಂ.</th><th>ಕೆರೆಯ ಸಂಖ್ಯೆ</th><th>ಕೆರೆಯ ಹೆಸರು</th><th>ಫಲಾನುಭವಿ ಹಳ್ಳಿಗಳು</th></tr>
<tr><td>1</td><td>ಟ್ಯಾಂಕ್-1</td><td>ಕೊಟ್ಟೂರು</td><td>ಕೊಟ್ಟೂರು, ರಾಂಪುರ & ಚಪ್ಪರಾದಳ್ಳಿ</td></tr>
<tr><td>2</td><td>ಟ್ಯಾಂಕ್-2</td><td>ಲೊಟ್ಟನಕೆರೆ</td><td>ಮಲ್ಲನಾಯಕನಹಳ್ಳಿ, ಹ್ಯೆಲ್ಯಾಂ, ಮೊತಿಕಲ್ ತಾಂಡ & ಲೋಕಿಕೆರೆ</td></tr>
<tr><td>3</td><td>ಟ್ಯಾಂಕ್-3</td><td>ತಿಮ್ಲಾಪುರ ತಾಂಡಾ</td><td>ತಿಮ್ಮಾಪುರ ತಾಂಡಾ & ಕಂದಗಲ್ಲು</td></tr>
<tr><td>4</td><td>ಟ್ಯಾಂಕ್-4</td><td>ಮುಟುಕನಹಳ್ಳಿ</td><td>ಮುಟುಕನಹಳ್ಳಿ & ಹೊಸ ಮುಟುಕನಹಳ್ಳಿ</td></tr>
<tr><td>5</td><td>ಟ್ಯಾಂಕ್-5</td><td>ಚಿಂತಲಪಲ್ಲೆ</td><td>ಚಿಂತಲಪಲ್ಲೆ, ಮುಟುಕುರು & ವಲ್ಲಭಾಪುರ</td></tr>
<tr><td>6</td><td>ಟ್ಯಾಂಕ್-6</td><td>ಬೆಣ್ಣೆಕಲ್ಲು</td><td>ಬೆಣ್ಣೆಕಲ್ಲು</td></tr>
<tr><td>7</td><td>ಟ್ಯಾಂಕ್-7</td><td>ದಾಸಮಾಪುರ</td><td>ದಾಸಮಾಪುರ</td></tr>
<tr><td>8</td><td>ಟ್ಯಾಂಕ್-8</td><td>ಹೊಸಕೆರೆ</td><td>ಹೊಸಕೆರೆ & ನಾರಾನಾಪುರ</td></tr>
<tr><td>9</td><td>ಟ್ಯಾಂಕ್-9</td><td>ಹಂಸಿ</td><td>ಹಂಸಿ & ಗೋಪಾಲಪುರ</td></tr>
<tr><td>10</td><td>ಟ್ಯಾಂಕ್-10</td><td>ಬ್ಯಾಳಹಲು</td><td>ಬ್ಯಾಳಹಲು</td></tr>
<tr><td>11</td><td>ಟ್ಯಾಂಕ್-11</td><td>ಹಂಪಾಪಟ್ನಂ</td><td>ಹಂಪಾಪಟ್ನಂ</td></tr>
<tr><td>12</td><td>ಟ್ಯಾಂಕ್-12</td><td>ಕೇಶವರಾಯನ ಬಂಡಿ</td><td>ಕೇಶವರಾಯನ ಬಂಡಿ</td></tr>
<tr><td>13</td><td>ಟ್ಯಾಂಕ್-13</td><td>ಓಬಲಾಪುರ</td><td>ಓಬಲಾಪುರ & ರಾಯರ್‍ಳ್ಯಾಲು</td></tr>
<tr><td>14</td><td>ಟ್ಯಾಂಕ್-14</td><td>ಹಲಗಾಪುರ</td><td>ಹಲಗಾಪುರ</td></tr>
<tr><td>15</td><td>ಟ್ಯಾಂಕ್-15</td><td>ಮುಗಿಮಾವಿನಹಳ್ಳಿ</td><td>ಮುಗಿಮಾವಿನಹಳ್ಳಿ & ಚಿಲಕನಹಟ್ಟಿ</td></tr>
<tr><td>16</td><td>ಟ್ಯಾಂಕ್-16</td><td>ವರದಾಪುರ</td><td>ವರದಾಪುರ & ಕೆಂಚಟ್ನಳ್ಳಿ</td></tr>
<tr><td>17</td><td>ಟ್ಯಾಂಕ್-17</td><td>ನಂದಿಬಂಡಾ</td><td>ನಂದಿಬಂಡಾ</td></tr>
</table>
<br>ತುಂಗಭದ್ರಾ ನದಿಯಿಂದ ಕೊಟ್ಟೂರು ಮತ್ತು ಇತರೆ 16 ಕೆರೆಗಳಿಗೆ ನೀರು ತುಂಬಿಸುವ ರೂ.379.00 ಕೋಟಿಗಳ ವಿವರವಾದ ಯೋಜನಾ ವರದಿಯನ್ನು (DPR) ಕರ್ನಾಟಕ ನೀರಾವರಿ ನಿಗಮದ ಅಂದಾಜುಗಳ ಸಮಿತಿ ಸಭೆಯಲ್ಲಿ ಮಂಡಿಸಿ, ತೀರುವಳಿ ಪಡೆಯಲಾಗಿರುತ್ತದೆ. ಸದರಿ ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದ ಪರಿಶೀಲನೆಯಲ್ಲಿದ್ದು, ಅನುದಾನ ಲಭ್ಯತೆಗನುಸಾರ ಯೋಜನೆಯ ಕುರಿತು ನಿಯಮಾನುಸಾರ ಕ್ರಮ ವಹಿಸಲಾಗುವುದು.</td></tr>
<tr><td>ಆ)</td><td>ಈ ಕೊಟ್ಟೂರು ಕೆರೆ ಹಾಗೂ ಇತರೆ ಕೆರೆಗಳನ್ನು ತುಂಬಿಸುವ ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ. ಈ ಯೋಜನೆಯ ವಿವರಗಳೇನು, ನೀರಿನ ಲಭ್ಯತೆಯೇನು; ಈ ಯೋಜನೆಗೆ ಸರ್ಕಾರ ಮೀಸಲಿಟ್ಟಿರುವ ಅನುದಾನ ಎಷ್ಟು, ಈ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ವಿವರಗಳನ್ನು ನೀಡುವುದು).</td></tr>
</table>

**ಜಸಂಇ 181 ಎಂಎಲ್ಎ 2022**

**(ಗೋವಿಂದ ಎಂ.ಕಾರಜೋಳ)**

ಜಲಸಂಪನ್ಮೂಲ ಸಚಿವರು